ಶ್ರೀ ಎಂ. ಮಹದೇವ (ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು)

ಅ. ರಾಜ್ಯದಲ್ಲಿ 2001-02ನೇ ಸಾಲಿನಲ್ಲಿ ಉತ್ಪಾಸಿದ ಸಕ್ಕರೆ ಪ್ರಮಾಣ -

1. ದಿ: 1.10.2001ರಲ್ಲಿದ್ದಂತೆ ಪ್ರಾರಂಭಿಕ ದಾಸ್ತಾನು - 9.45 ಲಕ್ಷ ಟನ್
2. 2001-02ನೇ ಸಾಲಿನಲ್ಲಿ ಉತ್ಪಾದಿಸಲಾದ ಸಕ್ಕರೆ - 14.51 ಲಕ್ಷ ಟನ್

ಸಕ್ಕರೆ ಲಭ್ಯತೆ

ಒಟ್ಟು - 24.05 ಲಕ್ಷ ಟನ್

ಆ. ಹೌದು

ಇ. ಸಕ್ಕರೆ ಕಾರ್ಖಾನೆಗಳು ತಮ್ಮ ವ್ಯವಹಾರಿಕ ಲಾಭಾಂಶದ ಆಧಾರದ ಮೇಲೆ ಸಕ್ಕರೆಯನ್ನು ಮಾರಾಟ ಮಾಡುತ್ತಿವೆ. ಕೇಂದ್ರ ಸರ್ಕಾರದಿಂದ ಹೆಚ್ಚಿನ ಬಿಡುಗಡೆಗೆ ಅಪೇಕ್ಷೆ ಪಟ್ಟ ಸಕ್ಕರೆ ಕಾರ್ಖಾನೆಗಳ ಪ್ರಸ್ತಾವನೆಯನ್ನು ಪರಿಗಣಿಸಿ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿ ಬಿಡುಗಡೆ ಆದೇಶ ಪಡೆಯಲಾಗುತ್ತಿದೆ. ಜೂನ್-2002ರಲ್ಲಿ ಇಂತ ಪ್ರಸ್ತಾವನೆಗಳನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿ ಸುಮಾರು 10,000 ಟನ್ ಸಕ್ಕರೆ ಬಿಡುಗಡೆಯ ಆದೇಶ ಪಡೆಯಲಾಗಿದೆ.

ಮಂಡ್ಯ ಜಿಲ್ಲೆಯಲ್ಲಿ ರೇಷ್ಮೆ ಕೃಷಿ ವಿಶೇಷ ಯೋಜನೆ

94(225): ಶ್ರೀ ಅತ್ಯಾನಂದ, ಎಂ.ಎಸ್. (ಮಂಡ್ಯ) ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ಮಂಡ್ಯ ಜಿಲ್ಲೆಯಲ್ಲಿ ರೇಷ್ಮೆ ಬೆಳೆಗೆ ವಿಶೇಷ ಆದ್ಯತೆ ನೀಡಲು ಮಂಡ್ಯ ಜಿಲ್ಲಾ ಪಂಚಾಯತ್ ಮತಿಯಿಂದ ಯೋಜನೆ ತಯಾರಿಸಿ ಸರ್ಕಾರದ ಒಪ್ಪಿಗೆಗಾಗಿ ಸಲ್ಲಿಸಲಾಗಿದೆಯೇ?

ಆ. ಹಾಗಿದ್ದಲ್ಲಿ, ಯೋಜನೆಗೆ ಮಂಜೂರಾತಿ ದೊರಕದಿರಲು ಕಾರಣವೇನು?

ಇ. ಈ ಯೋಜನೆಯ ವಿವರಗಳೇನು?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು)

ಅ. ಹೌದು.

ಆ. ಹೆಚ್ಚುವರಿ ವಂಟಣೆ ಒದಗಿಸಲು ಸಾಧ್ಯವಿಲ್ಲವೆಂದು ಹಾಗೂ ಜಿಲ್ಲಾ ಪಂಚಾಯತ್‌ಗೆ ಒದಗಿಸಿರುವ ಆಯವ್ಯಯಕೆ ಸೀಮಿತಗೊಳಿಸಿ ಯೋಜನೆಯನ್ನು ಕಾರ್ಯಗತಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ. ಈ ಕೆಳಕಂಡ ಕಾರ್ಯಕ್ರಮಗಳಿಗೆ ರೂ. 983.50 ಲಕ್ಷಗಳ ಯೋಜನೆಯನ್ನು ತಯಾರಿಸಲಾಗಿತ್ತು.

1. ಹೊಸ ತಳಿ ನರ್ಸರಿ ಬೆಳೆಸುವುದು.

2. ಹೊಸ ತಳಿ ಹಿಪ್ಪುನೇರಳೆ ನಾಟಿ.

3. ತರಬೇತಿ

4. ಹುಳು ಸಾಕಣೆ ಮನೆ ನಿರ್ಮಾಣ

5. ರೆಂಬೆ ಪದ್ದತಿ ಸಲಕರಣೆಗಳ ಸರಬರಾಜು

6. ಚಂದ್ರಿಕೆಗಳ ಸರಬರಾಜು

7. ರೋಗ ಮತ್ತು ಕೀಟ ನಿಯಂತ್ರಣ

8. ಖಾಸಗಿ ಚಾಕಿ ಸಾಕಾಣಿಕೆ ಕೇಂದ್ರಗಳಿಗೆ ಪ್ರೋತ್ಸಾಹ ಧನ.

9. ನೂಲು ಬಿಚ್ಚಾಣಿಕೆ ಯಂತ್ರೋಪಕರಣ ಮತ್ತು ಷೆಡ್ ನಿರ್ಮಾಣ.

ರಾಜ್ಯದಲ್ಲಿ ರೇಷ್ಮೆ ಬೆಲೆ ಕುಸಿತ

95(226): ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ. ರೇಷ್ಮೆ ಬೆಲೆ ಕುಸಿತದಿಂದಾಗಿ ರೈತರು ಸಂಕಷ್ಟ ಪರಿಸ್ಥಿತಿಯಲ್ಲಿ ಇರುವುದನ್ನು ಸರ್ಕಾರವು ಮನಗಂಡಿದೆಯೇ;

ಆ. ಸಂಕಷ್ಟ ಸ್ಥಿತಿಯಲ್ಲಿ ರೈತರಿಗೆ ನೆರವಾಗಲು ಸರ್ಕಾರವು ಕ್ರಮಗಳನ್ನು ಕೈಗೊಂಡಿದೆಯೇ?

ಇ. ಹಾಗಿದ್ದಲ್ಲಿ ಅದರ ವಿವರಗಳೇನು?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು)

ಅ. ಹೌದು

ಆ. ಹೌದು

ಇ.

1. ಇಲಾಖೆಯ ಸಮಸ್ಯೆಗಳ ಬಗ್ಗೆ ಅಧ್ಯಯನ ಮಾಡಿ ವರದಿ ಸಲ್ಲಿಸಲು ಸರ್ಕಾರವು ಒಂದು ತಜ್ಞರ ಸಮಿತಿಯು ರೇಷ್ಮೆಗೆ ಬೆಂಬಲ ಬೆಲೆ ನಿಗದಿಪಡಿಸಿ ವರದಿ ಸಲ್ಲಿಸಿದೆ. ಈ ವರದಿ ಸರ್ಕಾರದ ಪರಿಶೀಲನೆಯಲ್ಲಿದೆ.

2. ಮಾನ್ಯ ರೇಷ್ಮೆ ಸಚಿವರು ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಮಾನ್ಯ ಪ್ರಧಾನ ಮಂತ್ರಿಗಳು, ಕೇಂದ್ರ ಸರ್ಕಾರದ ಹಣಕಾಸು ಸಚಿವರು, ಜವಳಿ ಸಚಿವರು ಮತ್ತು ವಾಣಿಜ್ಯ ಸಚಿವರಿಗೆ ಪತ್ರ ಬರೆದು ಕೆಳಕಂಡ ಅಂಶಗಳ ಬಗ್ಗೆ ಕ್ರಮ ತೆಗೆದುಕೊಳ್ಳಲು ಕೋರಲಾಗಿದೆ.

   (ಅ) ಆಮದು ಸುಂಕವನ್ನು ಹೆಚ್ಚಿಸುವುದು

   (ಆ) ರಫ್ತು ಮಾಡುವ ಮೌಲ್ಯದ ಆಧಾರದ ಮೇಲೆ ಆಮದು ಮಾಡುವ ಬದಲು ರಫ್ತು ಮಾಡುವ ಜವಳಿ ಉತ್ಪಾದನೆಗೆ ಬಳಸುವ ರೇಷ್ಮೆ ಪ್ರಮಾಣ ಮತ್ತು ಗುಣಮಟ್ಟದ ರೇಷ್ಮೆ ಆಮದಿಗೆ ಮಾತ್ರ ಅನುಮತಿ ನೀಡುವುದು